**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ರವರ**
**ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ವಿಷಯ:** **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಜೀವನಬೀಮಾ ನಗರದ 12ನೇ ಮುಖ್ಯ ರಸ್ತೆಯಲ್ಲಿ National Blind Association ಇದ್ದು ಸದರಿ National Blind Association ನಲ್ಲಿರುವ ಅಂಧ ವಿದ್ಯಾರ್ಥಿಗಳು ಪ್ರತಿದಿನ ಸದರಿ ಮುಖ್ಯ ರಸ್ತೆಯಲ್ಲಿ ನಡೆದಾಡುವ ಅಭ್ಯಾಸ ಮಾಡುತ್ತಿರುತ್ತಾರೆ. ಆದರೆ ಸದರಿ 12ನೇ ಮುಖ್ಯ ರಸ್ತೆಯಲ್ಲಿ ಕೆಲವು ವಾಣಿಜ್ಯ ವಾಹನಗಳು ಖಾಯಂ ಆಗಿ ನಿಲ್ಲಿಸುತ್ತಿರುವುದರಿಂದ ಹಾಗೂ ಅಲ್ಲಿರುವ ಬೆಸ್ಕಾಂ ಕಛೇರಿಯವರು ರಸ್ತೆ, ಮೇಲೆ ಹಾಳಾದ ವಿದ್ಯುತ್ ಕೇಬಲ್‌ಗಳು ಬಿಸಾಕಿರುವುದರಿಂದ ಅಂಧ ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಂದರೆ ಆಗುತ್ತಿರುವುದಲ್ಲದೆ ಅಲ್ಲಿನ ನಿವಾಸಿಗಳಿಗೂ ಸಹ ತೊಂದರೆಯಾಗುತ್ತಿದೆ. ಆದ ಕಾರಣ ಸದರಿ ರಸ್ತೆಯಲ್ಲಿ ವಾಣಿಜ್ಯ ವಾಹನಗಳನ್ನು ನಿಲುಗಡೆ ಮಾಡದಂತೆ ಹಾಗೂ ರಸ್ತೆ ಮೇಲೆ ಬಿಸಾಕಿರುವ ಹಾಳಾದ ವಿದ್ಯುತ್ ಕೇಬಲ್‌ಗಳನ್ನು ತೆರವುಗೊಳಿಸುವ ಕುರಿತು.**

**ಉತ್ತರ:**

- ಜೀವನ್ ಭೀಮಾನಗರ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಜೀವನ್ ಭೀಮಾನಗರ 12ನೇ ಕ್ರಾಸ್ ರಸ್ತೆಯು ಜನ ವಸತಿ ಪ್ರದೇಶವಾಗಿದ್ದು, ಯಾವುದೇ ರೀತಿಯ ವಾಣಿಜ್ಯ ವಾಹನಗಳ ನಿಲುಗಡೆಯಾಗದಂತೆ ನಿಗಾವಹಿಸಲು ಕೋಬ್ರಾ ಸಿಬ್ಬಂದಿಗಳ ಪೆಟ್ರೋಲಿಂಗ್ ಕರ್ತವ್ಯದ ಜೊತೆಗೆ ಸಂಚಾರಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನೂ ಸಹ ನಿಯೋಜಿಸಲಾಗುತ್ತಿರುತ್ತದೆ.

- ದಿ ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಸಂಸ್ಥೆಯ ಬಳಿ ಸಂಚಾರಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿ ಅಂಧ ವಿದ್ಯಾರ್ಥಿಗಳ ಓಡಾಟಕ್ಕೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

- ರಸ್ತೆ ಮೇಲೆ ಹಾಳಾದ ವಿದ್ಯುತ್ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಬೆಸ್ಕಾಂ ವಿಭಾಗಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಅಂಧ ಮಕ್ಕಳ ಓಡಾಟದ ಹಿತದೃಷ್ಟಿಯಿಂದ ಖುದ್ದು ಪೊಲೀಸ್ ಇಲಾಖೆಯಿಂದ ಕೇಬಲ್‌ಗಳನ್ನು ತೆರವುಗೊಳಿಸುವ ಕಾರ್ಯವನ್ನು ಮಾಡಲಾಗಿರುತ್ತದೆ.

- ಪ್ರಸ್ತುತ ಸದರಿ ರಸ್ತೆಯಲ್ಲಿ ಯಾವುದೇ ವಾಣಿಜ್ಯ ವಾಹನಗಳು ನಿಲುಗಡೆಯಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿಯೂ ಯಾವುದೇ ರೀತಿಯ ವಾಣಿಜ್ಯ ವಾಹನಗಳು ನಿಲುಗಡೆಯಾಗದಂತೆ ನಿಯಮಾನುಸಾರ ನಿರಂತರ ಕ್ರಮ ಕೈಗೊಳ್ಳಲಾಗುವುದು.

---

ಹೆಚ್‌ಡಿ 371 ಎಸ್‌ಎಸ್‌ಟಿ 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು